**ಸಾಕ್ಷಿಯನ್ನು ದಿಃ 04-06-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪ್ರಮಾಣೀಕೃತ ಹೇಳಿಕೆಃ ದೂರುದಾರರ ಪರ ವಕೀಲರಿಂದಃ**

ನನ್ನ ಪ್ರಮಾಣ ಪೂರ್ವ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿ ಮತ್ತು ಸರಿಯಾಗಿರುತ್ತವೆ. ಅದರಲ್ಲಿ ಕಂಡು ಬರುವ ಸಹಿ ನನ್ನದೇ ಇರುತ್ತದೆ.

ನಾನು ಕೆಲವೊಂದು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

(1) ಆರೋಪಿಯು ನೀಡಿದ ಚೆಕ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ನಿ ಪಿ 1 ರ ಮೇಲೆ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

(2) ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು.

(3) ವಕೀಲರ ಮುಖಾಂತರ ಆರೋಪಿಗೆ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು.

(4) ಅಂಚೆ ರಸೀದಿ ಹಾಜರು ಪಡಿಸಿದ್ದು ಅದನ್ನು ನಿ ಪಿ 4 ಎಂದು ಗುರುತಿಸಲಾಯಿತು.

(5) ಅಂಚೆ ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 5 ಎಂದು ಗುರುತಿಸಲಾಯಿತು.

**ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಹರೀಶ್ ಸಿಂಗ್.ಹೆಚ್.ಜಿ)**

2 ನೇ ಅಪರ ಸಿವಿಲ್ ನ್ಯಾಯಾಧೀಶರು

**ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ.**